





ಹೆಣ್ಣು ಮಕ್ಕಳಿಗೆ ಪ್ರವಾಸ ಭಾಗ್ಯ ಕರುಣಿಸಿದ ಸರ್ಕಾರಕ್ಕೆ ಜೈ... ಜೈ...

**ಮಗಳು:** (ಅರ್ಜಿಯೊಂದನ್ನು ಭರ್ತಿ ಮಾಡುತ್ತಾ) ಪರ್ಮನೆಂಟ್ ಐಡೆಂಟಿಫಿಕೇಷನ್ ಮಾರ್ಕ್ ಅಂತ ಇದೆ, ಏನು ಬರೆಯಲಿ?

**ತಂದೆ:** ಎಡಗೈಯಲ್ಲಿ ಮೊಬೈಲ್ ಅಂತ ಬರಿ.

***

**ನೌಕರ:** ಸಾರ್ ನಾನು ನಾಳೆಯಿಂದ ಸರಿಯಾಗಿ 5 ಗಂಟೆಗೆಲ್ಲಾ ಮನೆಗೆ ಹೋಗುತ್ತೇನೆ.

**ಮ್ಯಾನೇಜರ್:** ಏಕೆ? ಏನು ವಿಷಯ?

**ನೌಕರ:** ಸಂಬಳ ಸಾಕಾಗುತ್ತಿಲ್ಲ, ಆದ್ದರಿಂದ ಸಂಜೆ ಆಟೋ ಓಡಿಸಿ ಹಣ ಗಳಿಸುವೆ.

**ಮ್ಯಾನೇಜರ್:** ಸರಿ ಸರಿ, ರಾತ್ರಿ ಏನಾದರೂ ಹಸಿವಾದರೆ ಕೆಂಪಣ್ಣನ ಸರ್ಕಲ್ ಬಳಿ ಬಾ. ನಾನು ಅಲ್ಲಿ ದೋಸಾ ವಡಾ, ಇಡ್ಲಿ ಮಾರುತ್ತಿರುತ್ತೇನೆ.

***

**ಪತಿ:** ಎದೆ ನೋಯ್ತಾ ಇದೆ. ಆಂಬ್ಯುಲೆನ್ಸ್‌ಗೆ ಫೋನ್ ಮಾಡು.

**ಪತ್ನಿ:** ಕರೆನ್ಸಿ ಖಾಲಿಯಾಗಿದೆ. ನಿಮ್ಮ ಫೋನ್‌ನಿಂದಲೇ ಕಾಲ್ ಮಾಡುವೆ. ಪಾಸ್‌ವರ್ಡ್ ಹೇಳಿ?

**ಪತಿ:** ಈಗ ಎದೆ ನೋವು ಕಡಿಮೆಯಾಗಿದೆ. ಫೋನ್ ಮಾಡುವುದು ಬೇಡ ಬಿಡು.

***

**ಹೆಂಡತಿ:** ಬೇಕಾದರೆ ನನಗೆ ಬೈಯಿರಿ. ನಮ್ಮ ಮನೆಯವರಿಗೆ ಏಕೆ ಬೈಯುತ್ತೀರಿ?

**ಪತಿ:** ಟಿ.ವಿ. ಹಾಳಾದರೆ, ಯಾರೂ ಟಿ.ವಿ.ಗೆ ಬೈಯುವುದಿಲ್ಲ. ಟಿ.ವಿ. ಕಂಪನಿಗೆ ಬೈಯೋದು.

***

**ಪತ್ನಿ:** (ಕನ್ನಡಿಯ ಎದುರು ನಿಂತು ಕೊಂಡು) ನಾನು ದಪ್ಪ ಕಾಣ್ತೇನಾ?

**ಪತಿ:** (ಸುಮ್ಮನೆ ಜಗಳ ಏಕೆಂದು) ಖಂಡಿತ ಇಲ್ಲ.

**ಪತ್ನಿ:** ಹಾಗಾದರೆ, ನನ್ನನ್ನು ತೋಳಿನಿಂದ ಎತ್ತಿ ಆ ಫ್ರಿಜ್ ಎದುರಿಗೆ ನಿಲ್ಲಿಸಿ. ನಾನು ಐಸ್‌ಕ್ರೀಂ ತಿನ್ನಬೇಕು.

ನಮ್ಮಲ್ಲಿ 200 ಕ್ಯಾಲರಿ ಬರ್ನ್ ಆಗಬೇಕಾದರೆ
45 ನಿಮಿಷ ನಡೆಯಬೇಕು.
18 ನಿಮಿಷ ಓಡಬೇಕು.
16 ನಿಮಿಷ ಈಜಬೇಕು.
23 ನಿಮಿಷ ಆಟ ಆಡಬೇಕು.
31 ನಿಮಿಷ ಯೋಗ ಮಾಡಬೇಕು.
ಆದರೆ, ಹೆಂಡತಿಯೊಂದಿಗೆ ವಾದಿಸಿದರೆ, ಜಗಳವಾಡಿದರೆ 5 ನಿಮಿಷಗಳು ಸಾಕು.




ಕಂಪ್ಯೂಟರ್ ಆನ್ ಮಾಡೋದನ್ನೂ ಕಲಿಯದೆ ಹೇಗೆ ಪರೀಕ್ಷೆ ಪಾಸ್ ಮಾಡ್ತೀರಾ? ಆನ್‌ಲೈನ್ ಅರ್ಜಿ ವಿಲೇವಾರಿ ಕಷ್ಟವೇ!

**ಪತಿ:** ನೀನು ನಿಂತಲ್ಲೇ ಇರು, ಫ್ರಿಜ್ ಅನ್ನೇ ನಿನ್ನ ಬಳಿ ಎತ್ತಿಕೊಂಡು ಬರುವೆ.

***

**ತಾಯಿ:** ನಮ್ಮ ಮನೆಯ ಕೆಲಸದವಳ ಮಗಳು ಐಎಎಸ್ ಪಾಸ್ ಮಾಡಿದ್ದಾಳೆ.

ಅಕ್ಕಿ ಮಹಿಮೆ ಗೊತ್ತೇ?
ಹೆಸರು ಬೇಳೆ ಜೊತೆ ಸೇರಿದರೆ – ಪೊಂಗಲ್
ಉದ್ದಿನ ಬೇಳೆ ಜೊತೆ ಸೇರಿದರೆ – ಇಡ್ಲಿ, ದೋಸೆ
ತೊಗರಿ ಬೇಳೆ ಜೊತೆ ಸೇರಿದರೆ – ಬಿಸಿಬೇಳೆ ಬಾತ್
ಕಡಲೆ ಬೇಳೆ ಜೊತೆ ಸೇರಿದರೆ – ಪಾಯಸ
ಅರಿಶಿನ ಕುಂಕುಮ ಜೊತೆ ಸೇರಿದರೆ – ಅಕ್ಷತೆ
ಎಳ್ಳಿನ ಜೊತೆ ಸೇರಿದರೆ – ಪಿಂಡ

**ಮಗಳು:** ಅಮ್ಮಾ, ನೀನು ಒಂದೆರಡು ಮನೆಯಲ್ಲಿ ಕೆಲಸ ಮಾಡಮ್ಮಾ.

***

**ಪತ್ನಿ:** (ತಲೆನೋವು ಎಂದ ಪತಿಯ ತಲೆ ಒತ್ತುತ್ತಾ ಪ್ರೀತಿಯಿಂದ ಪತ್ನಿ ಹೀಗೆ ಕೇಳಿದಳು) ಮದುವೆ ಮೊದಲು ನಿಮ್ಮ ತಲೆಯನ್ನು ಯಾರು ಒತ್ತುತ್ತಿದ್ದರು?

**ಪತಿ:** ಮದುವೆ ಮೊದಲು ತಲೆನೋವೇ ಬರುತ್ತಿರಲಿಲ್ಲ.

***

**ರೋಗಿ:** ಡಾಕ್ಟ್ರೇ ನೀವು ಇಷ್ಟು ಸಮಾಜ ಸೇವೆ ಮಾಡ್ತೀರಿ. ನೀವ್ಯಾಕೆ ಚುನಾವಣೆಗೆ ನಿಲ್ಲಬಾರದು?

**ಡಾಕ್ಟರ್:** ಚುನಾವಣೆಗೆ ಖರ್ಚು ಮಾಡುವ ದುಡ್ಡಿನಲ್ಲಿ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತೆರೆಯಬಹುದು.

***

**ರೋಗಿ:** ನಮ್ಮ ಮಗು ಅರ್ಧ ಲೀಟರ್ ಪೆಟ್ರೋಲ್ ಕುಡಿದುಬಿಟ್ಟಿದೆ.

**ಡಾಕ್ಟರ್:** 20 ಕಿ.ಮೀ. ಓಡಿಸು. ಸರಿ ಹೋಗುತ್ತೆ.

ಸಂಗ್ರಹ: ರಮಾನಂದ ಶರ್ಮಾ, ಬೆಂಗಳೂರು